ಟಿ.ಆರ್. ರವೀಂದ್ರ, ಬೆಂಗಳೂರು
*ದೇಶಸೇವೆ ಮಾಡಬೇಕೆಂದಿರುವೆ. ಖಾಕಿ ತೊಡಲೋ, ಕಾವಿ ತೊಡಲೋ, ಖಾದಿ ತೊಡಲೋ?*



ಲಂಗೋಟಿ ತೊಟ್ಟ ರೈತ ಅನ್ನ ಕೊಡುತ್ತಾನೆ. ದೇಶಸೇವೆಗೆ ಮುಖ್ಯವಾದುದು ತೊಡುಗೆಯಲ್ಲ, ನಿಷ್ಕಲ್ಮಷ ಕೊಡುಗೆ.

ಬಾ.ರಂ. ಸುರೇಶ್, ಶಿವಮೊಗ್ಗ
*ಹಣದಿಂದ ಮದ; ಹೆಂಡದಿಂದ ಮತ್ತು ಹೆಣ್ಣಿನಿಂದ?*
ಒಲಿದರೆ ಸ್ವತ್ತು; ಮುನಿದರೆ ಕುತ್ತು.

ಕೆ.ಹೆಚ್.ಆರ್.ಕೆ. ರೆಡ್ಡಿ, ಬೆಂಗಳೂರು
*ಇಲಿ ಯಾವಾಗಲೂ ಗಣೇಶನ ಹತ್ತಿರವೇ ಇರಲು ಕಾರಣವೇನು?*
ಅಷ್ಟೊಂದು ಉಂಡೆಗಳು, ತಿಂಡಿಗಳು ಇರುವುದರಿಂದ.

ಎಸ್.ಎನ್. ಮಹಾಬಲರಾವ್, ಅಗ್ರಹಾರ
*ಸರ್ಕಾರಿ ಕೆಲಸ ದೇವರ ಕೆಲಸ. ನಮ್ಮ ಕೆಲಸ?*
ಹರಕೆ, ಕಾಣಿಕೆ, ಮುಡಿಪು, ಕಪ್ಪ ಒಪ್ಪಿಸುವ ಭಕ್ತರ ಕೆಲಸ.

ಬೋ.ಪಾ. ವೆಂಕಟೇಶ್, ಸಮೇತನಹಳ್ಳಿ
*ಕರೆನ್ಸಿ ನೋಟುಗಳ ಬದಲಾವಣೆಯಿಂದ ಕಪ್ಪುಹಣದ ಬಳಕೆ ನಿಲ್ಲಿಸಬಹುದೆ?*




ಹುಚ್ಚಪ್ಪ; ಬಟ್ಟೆ ಬದಲಾಯಿಸಿದರೆ ಭಾವ ಬದಲಾದೀತೇ..

ಪಿ.ಜಿ. ಸಜ್ಜನ, ಶಿರಸಿ
*ನವದಂಪತಿಗಳನ್ನು 'ನಿಮ್ಮ ಸೂಪರ್ ಮಿನಿಟ್ ಯಾವುದು?' ಎಂದು ಕೇಳಿದರೆ ಉತ್ತರವಿಲ್ಲ. ಏಕೆ?*
ಜಗಳವಾಡುವವರಿಗೆ ಕಾಯ್ದು ಕೇಳಿರಿ. ವಿರಸದ ನಂತರದ ಮಿಲನದ ಕ್ಷಣವೇ ಎಂದಿಗೂ ಸೂಪರ್ ಮಿನಿಟ್.

ಡಿ. ದೊಡ್ಡಲಿಂಗೇಗೌಡ, ಕೊಳ್ಳೇಗಾಲ
*ಪ್ರಶ್ನೆ ಕೇಳುವವ ಗುರು; ಉತ್ತರಿಸಬೇಕಾದವನು ಶಿಷ್ಯ. ಆದರೆ ಇಲ್ಲಿ ಅದಲುಬದಲಾಗಿದೆಯಲ್ಲಾ...?*
ಈ ಸನ್ನಿವೇಶ ಬೇರೆ. ಪ್ರಶ್ನಿಸುವವರು ಯಕ್ಷ; ಪ್ರಾಣ ಉಳಿಸಿಕೊಳ್ಳಲು ಉತ್ತರಿಸಬೇಕಾದ ಧರ್ಮಕ್ಕೆ ಸಿಲುಕಿದವನು ನಾನು.

ಅನಂತಪದ್ಮನಾಭ ಹೆಚ್.ಎಂ., ಮೈಸೂರು
*ತೌಲನಿಕ ಅಧ್ಯಯನಕ್ಕೂ, ತಲಸ್ಪರ್ಶಿ ಅಧ್ಯಯನಕ್ಕೂ ಇರುವ ವ್ಯತ್ಯಾಸವೇನು?*
ಅಧ್ಯಯನದಿಂದ ಎಷ್ಟು ಸಿಗುತ್ತದೆಂದು ತೂಕ ಮಾಡುವುದು ತೌಲನಿಕ; ತಳದವರೆಗೆ ಗೋರಿಕೊಳ್ಳುವುದು ತಲಸ್ಪರ್ಶಿ.

ಪೇಂಟರ್ ಪಾಪು, ಸಂತೇಮರಹಳ್ಳಿ
*ನಗಿಸುವುದು ತುಂಬಾನೇ ಕಷ್ಟ. ಆದರೆ ಅಳಿಸುವುದು ಭಾರಿ ಸುಲಭ. ಏಕೆ?*
ಅಳಿಸುವುದಕ್ಕೆ ಟಿವಿ ಆನ್ ಮಾಡಿದರೆ ಸಾಕು; ನಗಿಸಲು ರಿಪೀಟ್ ಆಗಿರದ ಜೋಕ್ ಸೃಷ್ಟಿಸಬೇಕಲ್ಲ.

ಎ. ಕೃಷ್ಣಾನಂದಶೆಟ್ಟಿ, ಮುಲ್ಕಿ
*ಸಿನಿಮಾಗಳಲ್ಲಿ ಹೀರೋಗಳು ಫೈಟ್ ಮಾಡುವಾಗ ಹೀರೋಯಿನ್‌ಗಳು ಡ್ಯಾನ್ಸ್ ಮಾಡುವುದು ಏಕೆ?*
ವಿಲನ್‌ಗಳಿಗೆ ಎಲ್ಲಿ ನೋಡಬೇಕೆಂದು ತಿಳಿಯದೆ ಕನ್‌ಫ್ಯೂಸ್ ಆಗಿ ಸೋಲಲೆಂದು.

ಕೆ.ಎನ್. ನಾರಾಯಣರೆಡ್ಡಿ, ಕೆ.ಜಿ.ಎಫ್.
*ರಾಜಕಾರಣಿಗಳಲ್ಲಿಯೂ ಪ್ರಾಮಾಣಿಕರಿದ್ದಾರೆಯೆ?*
ಇದ್ದಾರೆ. ವಿಳಾಸಕ್ಕೆ ಹತ್ತಿರದ ಗೋರಿಯನ್ನು ಸಂಪರ್ಕಿಸಿ.

ರಮೇಶ್, ಹನುಮನಾಳು
*ಇಲ್ಲೊಬ್ಬಳು ಹೊಸ ವರ್ಷಕ್ಕೆ ಬೇವಿನ ಗಿಡವನ್ನು ನೆನಪಾಗಿ ಕೊಟ್ಟಿದ್ದಾಳೇಕೆ?*
ಬೇವು ಉಸಿರಿನ ದುರ್ಗಂಧವನ್ನು ತಡೆಯುತ್ತದಂತೆ...

ರವಿನವಿ, ಬಾಳೆಹೊನ್ನೂರು
*ಡಾಕ್ಟರ್ ಕೊಡುವ ಮಾತ್ರೆಯನ್ನು ಮೂರು ಸಲ ತೆಗೆದುಕೊಳ್ಳುವ ಬದಲು ಒಂದೇ ಸಲ ತೆಗೆದುಕೊಂಡರೆ ಆಗಲ್ವೆ?*
ಆಗಬಹುದು. ನಂತರ ಮಾತ್ರೆ ಬೇಕಾಗಲ್ಲ; ಕೇವಲ ಸ್ಟಮಕ್ ವಾಷ್, ಬಯಾಪ್ಸಿ, ಅಬ್ಬಬ್ಬಾಂದ್ರೆ ಪೋಸ್ಟ್ ಮಾರ್ಟಮ್ ಸಾಕು.

## ಬಹುಮಾನಿತ ಪ್ರಶ್ನೆ

ಆರ್. ಮಧುಸೂದನ್, ಹಾಸನ
*ಮುತ್ತೈದೆ ಸಾವಿಗೆ ಅಷ್ಟೊಂದು ಶ್ರೇಷ್ಠತೆ ಏಕೆ?*
ಗಂಡನಿಗೆ ಮತ್ತೆ ಮಂಗನಾಗಲು ಸ್ವಾತಂತ್ರ್ಯ ನೀಡಿದ್ದು ಕಡಿಮೆ ಸಾಧನೆಯಲ್ಲವಂತೆ.

ಎಚ್.ಆರ್. ಕಡಿವಾಲ, ಬಾದಾಮಿ
*ಚುನಾವಣೆ ಪೂರ್ವದಲ್ಲಿ ಸಾಕಷ್ಟು ಆಶ್ವಾಸನೆ ನೀಡಿ ಆಯ್ಕೆಯಾದ ನಂತರ ಯಾವುದೇ ಕೆಲಸ ಮಾಡುವುದಿಲ್ಲ. ಯಾಕೆ?*
ಮಾರಾಟ ನಿಯಮ; ಸೇಲ್ಸ್ ವಿಂಗೇ ಬೇರೆ; ಸರ್ವೀಸ್ ವಿಂಗೇ ಬೇರೆ. ಎರಡಕ್ಕೂ ತಾಳೆ ಇರುವಂತಿಲ್ಲ.

ಆರತಿ ಘಟಿಕಾರ್, ದುಬೈ
*ಈಗಿನ ಸಿಸಿಟಿವಿ ಕ್ಯಾಮೆರಾಗಳನ್ನು ಸತ್ಯಹರಿಶ್ಚಂದ್ರನ ವಂಶಸ್ಥರೆನ್ನಬಹುದೆ?*
ಅವು ಸತ್ಯವನ್ನು ಹೇಳುವುದಿಲ್ಲ, ಕೇವಲ ನೋಡುತ್ತವೆ. ಆದ್ದರಿಂದ ನಕ್ಷತ್ರಕನ ವಂಶಸ್ಥರು ಎನ್ನಬಹುದು.

ಸುಮಂತ್ ಲಕ್ಕಯ್ಯ, ಮಂಗನಹಳ್ಳಿ
*ಮನುಷ್ಯ ಮತ್ತು ತಿಮಿಂಗಿಲಗಳು ಕಪ್ಪೆಯಂತೆ ಉಭಯವಾಸಿಗಳಾಗಿದ್ದರೆ ಈ ಪ್ರಪಂಚ ಹೇಗಿರುತ್ತಿತ್ತು ರಾಮ್?*



ನಮ್ಮ ರಾಜಕಾರಣಿಗಳನ್ನು ಕಂಡೂ ನಿಮಗೆ ಮನುಷ್ಯ, ತಿಮಿಂಗಿಲ, ಕಪ್ಪೆಗಳು ಬೇರೆಬೇರೆ ಅನ್ನಿಸುತ್ತಿರುವುದೇ ಮಹದಾಶ್ಚರ್ಯ.

ಪಿ.ಜೆ. ರಾಘವೇಂದ್ರ, ಮೈಸೂರು
*ಅತಿಯಾದರೆ ಅಮೃತವೂ ವಿಷವಾಗುವುದು. ಆದರೆ ವಿಷವು ಅತಿಯಾದರೆ ಅಮೃತವಾಗುವುದಿಲ್ಲ. ಏಕೆ?*
ಅತಿಯಾಗುವುದಕ್ಕೆ ಮುಂಚೆಯೇ ಸೇವಿಸಿದವರು ಮೃತ ಆಗುವುದರಿಂದ ಅಮೃತವಾಗಲು ಚಾನ್ಸ್ ಸಿಗುತ್ತಿಲ್ಲವಂತೆ.

ವಿ. ಹಮೀದ್, ವಿಟ್ಲ
*ತವರುಮನೆಯ ಸೀರೆಗೂ, ಪತಿಯ ಮನೆಯ ಸೀರೆಗೂ ಇರುವ ವ್ಯತ್ಯಾಸ?*
ಪತಿಯ ಮನೆಯ ಸೀರೆಯ ಬಗ್ಗೆ ಟೀಕೆ ಓಕೆ; ತವರಿನ ಸೀರೆಯ ಬಗ್ಗೆ ಮಾತಾಡೀರಿ, ಜೋಕೆ!

■ ರಾಮ್